In addition to above there are 21 Teachers in Veterinary faculty and 16 Teachers in Fisheries faculty who are holding original post of Instructors. The University has created Teaching and Non-Teaching posts to Veterinary College Shimoga and Hassan, land action will be taken to fill up these posts early.

793 ಶ್ರೀ ಸುರೇಶ್‌ಗೌಡ (ನಾಗಮಂಗಲ) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗಮಂಗಲ ತಾಲ್ಲೂಕಿನಲ್ಲಿ ಎಷ್ಟು ಪ್ರಾಥಮಿಕ, ಪಶುಘಟಕಗಳು ಹಾಗೂ ಪಶುಚಿಕಿತ್ಸಾಲಯಗಳು ಇವೆ?

ಆ) ಈ ಪ್ರಾಥಮಿಕ ಪಶು ಘಟಕಗಳು/ಪಶು ಚಿಕಿತ್ಸಾಲಯಗಳು ಎಷ್ಟು ಸ್ವಂತ ಕಟ್ಟಡಗಳನ್ನು ಹೊಂದಿವೆ ಹಾಗೂ ಎಷ್ಟಕ್ಕೆ ಸ್ವಂತ ಕಟ್ಟಡಗಳಿರುವುದಿಲ್ಲ. (ವಿವರ ನೀಡುವುದು);

ಇ) ಈ ಪ್ರಾಥಮಿಕ ಪಶು ಘಟಕಗಳನ್ನು ಪಶು ಚಿಕಿತ್ಸಾಲಯವನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಈ) ಸ್ವಂತ ಕಟ್ಟಡಗಳಿಲ್ಲದ ಪಶು ಘಟಕಗಳಿಗೆ ಹಾಗೂ ಪಶು ಚಿಕಿತ್ಸಾಲಯಗಳಿಗೆ ಹೊಸ ಕಟ್ಟಡ ನಿರ್ಮಾಣ ಮಾಡಲು ಸರ್ಕಾರವು ಅನುದಾನ ಬಿಡುಗಡೆ ಮಾಡಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) ನಾಗಮಂಗಲ ತಾಲ್ಲೂಕಿನಲ್ಲಿ ಹಾಲಿ 4 ಪಶುವೈದ್ಯಕೀಯ ಆಸ್ಪತ್ರೆಗಳು, 9 ಪಶು ಚಿಕಿತ್ಸಾಲಯಗಳು ಮತ್ತು 13 ಪ್ರಾಥಮಿಕ ಪಶು ಚಿಕಿತ್ಸಾಲಯಗಳು ಕಾರ್ಯ ನಿರ್ವಹಿಸುತ್ತಿವೆ.

ಆ) 3 ಪಶು ವೈದ್ಯಕೀಯ ಆಸ್ಪತ್ರೆಗಳು, 5 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು ಮತ್ತು 6 ಪಶು ಚಿಕಿತ್ಸಾಲಯಗಳು ಸ್ವಂತ ಕಟ್ಟಡ ಹೊಂದಿದ್ದು, 1 ಪಶು ವೈದ್ಯಕೀಯ ಆಸ್ಪತ್ರೆ, 8 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು ಮತ್ತು 3 ಪಶುಚಿಕಿತ್ಸಾಲಯಗಳು ಸ್ವಂತ ಕಟ್ಟಡ ಹೊಂದಿರುವುದಿಲ್ಲ. ವಿವರಗಳು ಅನುಬಂಧದಲ್ಲಿ ನೋಡುವುದು.

ಇ) ಪ್ರಸ್ತಾವನೆ ಬಂದಿರುವುದಿಲ್ಲ.

ಈ) ನಾಗಮಂಗಲ ತಾಲ್ಲೂಕಿಗೆ ಕೇಂದ್ರ ಸ್ಥಾನದಲ್ಲಿ ಪಶುವೈದ್ಯಕೀಯ ಆಸ್ಪತ್ರೆ ಕಟ್ಟಡಕ್ಕಾಗಿ ರೂ.50 ಲಕ್ಷಗಳು ಬಿಡುಗಡೆಯಾಗಿದ್ದು ಕಟ್ಟಡ ನಿರ್ಮಾಣ ಮಾಡಲು ನೀರ್ಮಿತಿ ಕೇಂದ್ರದವರಿಗೆ ವಹಿಸಲಾಗಿದ್ದು ಕಾಮಗಾರಿ ಪ್ರಾರಂಭವಾಗಬೇಕಾಗಿದೆ.

ಟಿ. ಚನ್ನಪುರಕ್ಕೆ ಹಿಂದುಳಿದ ತಾಲ್ಲೂಕುಗಳಲ್ಲಿ ಪಶು ಚಿಕಿತ್ಸಾಲಯ ತೆರೆಯುವ ಯೋಜನೆಯಡಿಯಲ್ಲಿ ಹಣ ಬಿಡುಗಡೆಯಾಗಿದ್ದು ಕಾರ್ಯಪಾಲಕ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮಂಡ್ಯದವರು ಕಾಮಗಾರಿ ಪ್ರಾರಂಭ ಮಾಡಬೇಕಾಗಿದೆ. ಆರ್.ಐ.ಡಿ.ಎಫ್. 11ರಡಿಯಲ್ಲಿ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ, ಕೆಲಗೆರೆ, ಅಂಚೆಚೆಟ್ಟನಹಳ್ಳಿ ಹಾಗೂ ಪಶು ಚಿಕಿತ್ಸಾಲಯ ಹಾಲ್ತಿಗಳಲ್ಲಿ ಮಂಜೂರಾತಿ ದೊರೆತಿದ್ದು ಕಾಮಗಾರಿ ಪ್ರಗತಿಯಲ್ಲಿದೆ. ಆರ್.ಐ.ಡಿ.ಎಫ್. 13ರ ಅಡಿಯಲ್ಲಿ ಬೃಹ್ಮದೇವರ ಹಳ್ಳಿಯ ಪಶುಚಿಕಿತ್ಸಾಲಯ ಕಟ್ಟಡಕ್ಕೆ ಮಂಜೂರಾತಿ ದೊರೆತಿದ್ದು ಕಾಮಗಾರಿ ಪ್ರಾರಂಭವಾಗಬೇಕಾಗಿದೆ.

ಸ್ವಂತ ಕಟ್ಟಡವಿಲ್ಲದ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳಿಗೆ ನಿವೇಶನಗಳು ದೊರೆತು ಇಲಾಖೆಯ ಹೆಸರಿನಲ್ಲಿ ನೋಂದಣಿಯಾದ ನಂತರ ಆರ್.ಐ.ಡಿ.ಎಫ್. ಯೋಜನೆಯಡಿಯಲ್ಲಿ ಕಟ್ಟಡ ನಿರ್ಮಿಸುವ ಬಗ್ಗೆ ಪರಿಶೀಲಿಸಲಾಗುವುದು.

ಅನುಬಂಧ

ಕ್ರ. ಸಂ.	ಪಶುವೈದ್ಯ ಸಂಸ್ಥೆಗಳು	ಸ್ವಂತ ಕಟ್ಟಡ ಹೊಂದಿರುವುದು	ಸ್ವಂತ ಕಟ್ಟಡ ಇಲ್ಲದಿರುವುದು
1	ಪಶುವೈದ್ಯಕೀಯ ಆಸ್ಪತ್ರೆ	1. ಬೆಳ್ಳೂರು 2. ಆದಿಚುಂಚನಗಿರಿ 3. ಕದಬಹಳ್ಳಿ	ಪಶುವೈದ್ಯಕೀಯ ಆಸ್ಪತ್ರೆ (ಪಾಲಿ ಕೇನಿಕ್) ನಾಗಮಂಗಲ
2	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	1. ತಟ್ಟೆಕೆರೆ 2. ಕಾಳಿಂಗನಹಳ್ಳಿ 3. ದೊಡ್ಡಜಟಕಾ 4. ಕಾಂತಾಪುರ 5. ಚೀಣ್ಯ	1. ಕೆಲಗೆರೆ 2. ಅಂಚೆಚಿಟ್ಟನಹಳ್ಳಿ 3. ಬಿಂಡೇನಹಳ್ಳಿ 4. ತಿರುಮಲಾಪುರ 5. ಚಾಕೇನಹಳ್ಳಿ 6. ಲಾಳನಕೆರೆ 7. ಸಾತೇನಹಳ್ಳಿ 8. ದೊಡ್ಡಜಕ್ಕನಹಳ್ಳಿ
3	ಪಶು ಚಿಕಿತ್ಸಾಲಯಗಳು	1. ಹೊಣಕೆರೆ 2. ಬಿಂದಿಗನವಿಲೆ 3. ದೇವಲಾಪುರ 4. ಬೋಗಾಧಿ 5. ಬೀಮನಹಳ್ಳಿ 6. ಹರದನಹಳ್ಳಿ	1. ಹಾಲ್ತಿ 2. ಟಿ.ಚಹ್ನಾಪುರ 3. ಬ್ರಹ್ಮದೇವರಹಳ್ಳಿ

793 Sri Suresh Gowda (Nagamangala) : Hon'ble Minister for Animal Husbandry kindly answer to the below question?

a) How many Primary Veterinary Centers, Veterinary Dispensaries are there in Nagamangala Taluk?

b) How many Veterinary Institutions have their own buildings and how many do not have? (give particulars)

c) What is the action taken by the Government to upgrade the Primary Veterinary Centers?

d) What is the action taken by the Government to release the grant for construction of new buildings, which are not having the buildings?

Sri Revunaik Belamagi (Minister for Animal Husbandry):

a) There are 4 Veterinary Hospitals, 9 Veterinary Dispensaries and 13 Primary Veterinary Centers working in Nagamangala Taluk.

b) 3 Veterinary Hospitals, 5 Primary Veterinary Centers and 6 Vetierinary Dispensaries hane own buildings and I Veterinary Hospital, 8 Primary Veterinary Centers and 3 Veterinary Dispensaries do not have own buildings. Details are at Annexure.

c) Proposal not received

d) Rs.50.00 lakhs is released for the construction of Veterinary Hospital at Taluk headquarter of Nagamangala. The construction work is assigned to Nirmitha Kendra and the work is yet to be started. Under the scheme opening of Veterinary Dispensaries in Backward Taluks budget has been released to T. Chennapura. Work is entrusted to Executive Engineer, Zilla Panchayath, Mandya and the same is yet to be started.

Under RIDF XI construction of building for Veterinary Dispensary Halthi and Primary Veterinary Center at Anchechattanhally and Kelagere have been sanctioned and work is under progress. Under RIDF XIII sanction is accorded for construction of building to Veterinary Dispensary at Brahmadevarahally and the work is yet to be taken up. The Instititions, which do not have, own buildings will be included in the RIDF, provided they get sites and registered in the name of the Department.

ಅನುಬಂಧ

ಕ್ರ ಸಂ.	ಪಶುವೈದ್ಯ ಸಂಸ್ಥೆಗಳು	ಸ್ವಂತ ಕಟ್ಟಡ ಹೊಂದಿರುವುದು	ಸ್ವಂತ ಕಟ್ಟಡ ಇಲ್ಲದಿರುವುದು
1	ಪಶುವೈದ್ಯಕೀಯ ಆಸ್ಪತ್ರೆ	1. ಬೆಳ್ಳೂರು 2. ಆದಿಚುಂಚನಗಿರಿ 3. ಕದಬಹಳ್ಳಿ	ಪಶುವೈದ್ಯಕೀಯ ಆಸ್ಪತ್ರೆ (ಪಾಲಿ ಕೀನಿಕ್) ನಾಗಮಂಗಲ
2	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	1. ತಟ್ಟೆಕೆರೆ 2. ಕಾಳಿಂಗನಹಳ್ಳಿ 3. ದೊಡ್ಡಜಟಕಾ 4. ಕಾಂತಾಪುರ 5. ಚೀಣ್ಯ	1. ಕೆಲಗೆರೆ 2. ಅಂಚೆಚಿಟ್ಟನಹಳ್ಳಿ 3. ಬಿಂಡೇನಹಳ್ಳಿ 4. ತಿರುಮಲಾಪುರ 5. ಚಾಕೇನಹಳ್ಳಿ 6. ಲಾಳನಕೆರೆ 7. ಸಾತೇನಹಳ್ಳಿ 8. ದೊಡ್ಡಜಕ್ಕನಹಳ್ಳಿ
3	ಪಶು ಚಿಕಿತ್ಸಾಲಯಗಳು	1. ಹೊಣಕೆರೆ 2. ಬಿಂದಿಗನವಿಲೆ 3. ದೇವಲಾಪುರ 4. ಬೋಗಾಧಿ 5. ಬೀಮನಹಳ್ಳಿ 6. ಹರದನಹಳ್ಳಿ	1. ಹಾಲ್ತಿ 2. ಟಿ.ಚಹ್ನಾಪುರ 3. ಬ್ರಹ್ಮದೇವರಹಳ್ಳಿ

ದೇವಸ್ಥಾನಗಳಿಗೆ ಬಿಡುಗಡೆ ಮಾಡಿರುವ ಅನುದಾನ

883 ಶ್ರೀ ನಾಗೇಂದ್ರ ಬಿ : ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆ, ಕೂಡ್ಲಿಗಿ ತಾಲ್ಲೂಕಿನಲ್ಲಿರುವ ವಿವಿಧ ದೇವಸ್ಥಾನಗಳು ಯಾವುವು ಹಾಗೂ ಇದರಲ್ಲಿ ಮುಜರಾಯಿ ಇಲಾಖೆಯ ವಶದಲ್ಲಿರುವ ದೇವಸ್ಥಾನಗಳು ಯಾವುವು (ಗ್ರಾಮವಾರು ವಿವರ ನೀಡುವುದು);

ಆ) ಕಳೆದ ಎರಡು ವರ್ಷಗಳಿಂದ ವಿವಿಧ ದೇವಸ್ಥಾನಗಳಿಗೆ ಬಿಡುಗಡೆ ಮಾಡಿರುವ ಅನುದಾನ ಎಷ್ಟು (ವಿವರ ನೀಡುವುದು);

ಇ) ಕಳೆದ ಎರಡು ವರ್ಷಗಳಿಂದ ಮುಜರಾಯಿ ಇಲಾಖೆ ವತಿಯಿಂದ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಕೈಗೊಂಡ ಕಾಮಗಾರಿಗಳು ಯಾವ ಹಂತದಲ್ಲಿದೆ (ವಿವರ ನೀಡುವುದು);